**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್ 485/2023**

**ಸಿ ಡಬ್ಲ್ಯೂ -2**
**ಪಿ ಡಬ್ಲ್ಯೂ -2**

| | |
|---|---|
| **ಸಾಕ್ಷಿಯ ಹೆಸರು -** | **ಅಂಬಣ್ಣ** |
| **ತಂದೆಯ ಹೆಸರು -** | **ಹುಲುಗಪ್ಪ** |
| **ವಯಸ್ಸು -** | **41 ವರ್ಷಗಳು** |
| **ಉದ್ಯೋಗ -** | **ಹಣ್ಣಿನ ವ್ಯಾಪಾರಿ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ 20-11-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ **1** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿಃ **1**(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಸುಮಾರು **2-3** ವರ್ಷಗಳ ಹಿಂದೆ ಹೊಸಪೇಟೆ ಪಟ್ಟಣ ಪೋಲಿಸ ಠಾಣೆಯಲ್ಲಿ ಮಾಡಿದ್ದೆ. ನಿಪಿಃ **1** ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗಿಲ್ಲ ಮತ್ತು ಮುದ್ದೆ ಮಾಲು ಜಪ್ತು ಪಡಿಸಿಕೊಂಡಿಲ್ಲ. ಆರೋಪಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**CC 485/2023**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 06-01-2023 ರಂದು ಮಧ್ಯಾಹ್ನ 3.30 ಗಂಟೆಗೆ ಪೋಲಿಸರು ನನ್ನನ್ನು ಮತ್ತು ಚಾಸಾ -3 ರವರನ್ನು ಅವರಿಗೆ ಬಂದಿದ್ದ ಮಾಹಿತಿ ಪ್ರಕಾರ ಜೂಜಾಟ ನಡೆಯುತ್ತಿದ್ದ ಸ್ಥಳವಾದ ಉದ್ಯೋಗ ಪೆಟ್ರೋಲ್ ಬಂಕ್ ಹತ್ತಿರ ಕರೆದುಕೊಂಡು ಹೋಗಿ ಮಧ್ಯಾಹ್ನ 4.00 ಗಂಟೆಗೆ ನಮ್ಮ ಸಮಕ್ಷಮ ದಾಳಿ ಮಾಡಿ 1 ನೇ ಆರೋಪಿಯನ್ನು ಹಿಡಿದಿದ್ದರು ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ಆತನ ತಾಬಾ ದಿಂದ ಜಪ್ತು ಪಡಿಸಿಕೊಳ್ಳಲಾಗಿತ್ತು ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಗೆ ಮಟಕಾ ಹಣವನ್ನು ಕೊಡುವುದಾಗಿ 1 ನೇ ಆರೋಪಿ ತಿಳಿಸಿದ್ದ ಅಂದರೆ ಸರಿಯಲ್ಲ. ಸ್ಥಳದಲ್ಲಿಯೇ ನಿಪಿಃ 1 ರ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದಿದ್ದರು ಅಂದರೆ ಸರಿಯಲ್ಲ.

ನನ್ನ ಸಮಕ್ಷಮ ಪಂಚನಾಮೆ ಆಗಿದ್ದರೂ ಮುದ್ದೆ ಮಾಲುಗಳನ್ನು ಗುರುತಿಸಲು ಸಾಧ್ಯವಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎನ್ ಎಸ್ ಎಚ್ ವಕೀಲರಿಂದಃ** ಇಲ್ಲಾ

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.